ಆ) ಪ್ರಸಕ್ತ ಸಾಲಿನಲ್ಲಿ ಮಂಜೂರಾದ ಪ್ರೌಢಶಾಲೆಗಳ ಸಂಖ್ಯೆ ಎಷ್ಟು,

ಇ) ಪ್ರಸ್ತಾವನೆಗಳಲ್ಲಿ ಬಾಕಿ ಉಳಿದ ಪ್ರೌಢಶಾಲೆಗಳ ಮಂಜೂರಾತಿ ಕುರಿತು ಸರ್ಕಾರದ ಕ್ರಮವೇನು?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) 365

ಆ) 485

ಇ) ಆಯವ್ಯಯದಲ್ಲಿನ ಅವಕಾಶ ಹಾಗೂ ಶೈಕ್ಷಣಿಕ ಅಗತ್ಯತೆ, ಇವುಗಳನ್ನು ಗಮನದಲ್ಲಿಟ್ಟುಕೊಂಡು, ಹೊಸ ಸರ್ಕಾರಿ ಪ್ರೌಢಶಾಲೆಗಳನ್ನು ಹಂತ ಹಂತವಾಗಿ ಮಂಜೂರು ಮಾಡಲಾಗುತ್ತಿದೆ

510(552) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) 2006–07ನೇ ಸಾಲಿನಲ್ಲಿ ಮಲಪ್ರಭಾ ಯೋಜನೆ ಮುಖ್ಯ ಕಾಲುವೆಗಳ ಸುಧಾರಣೆ ಕುರಿತು ಬಿಡುಗಡೆಯಾದ ಅನುದಾನವೆಷ್ಟು, ಅದರಲ್ಲಿ ವೆಚ್ಚ ಮಾಡಿದ ಹಣವೆಷ್ಟು,

ಆ) ಕಾಲುವೆಗಳ ಸುಧಾರಣೆ ಪೂರ್ಣಗೊಂಡಿದೆಯೇ, (ವಿವರ ನೀಡುವುದು)

ಇ) ಅಚ್ಚುಕಟ್ಟು ಪ್ರದೇಶದ ಕೊನೆಯ ಹಂತದ ರೈತರಿಗೆ ಹಂಚು ಕಾಲುವೆಗಳ ಸುಧಾರಣೆ ಲಾಭ ಲಭ್ಯವಾಗಿದೆಯೇ?

ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು)

ಅ) ಮಲಪ್ರಭಾ ಬಲದಂಡೆ ನಾಲೆಯ ಸುಧಾರಣೆ ಕಾಮಗಾರಿಗಳಿಗಾಗಿ 2006–07ನೇ ಸಾಲಿಗೆ ರೂ 1707 00 ಲಕ್ಷಗಳ ಅನುದಾನ ನಿಗದಿಪಡಿಸಲಾಗಿರುತ್ತದೆ ಡಿಸೆಂಬರ್ 2006ರ ಅಂತ್ಯದವರೆಗೆ ರೂ 191 41 ಲಕ್ಷಗಳು ವೆಚ್ಚವಾಗಿರುತ್ತವೆ

ಮಲಪ್ರಭಾ ಎಡದಂಡೆ ನಾಲೆಯ ಸುಧಾರಣೆ ಕಾಮಗಾರಿಗಳಿಗಾಗಿ 2006–07ನೇ ಸಾಲಿಗೆ ರೂ 3062 00 ಲಕ್ಷಗಳ ಅನುದಾನ ನಿಗದಿಪಡಿಸಲಾಗಿರುತ್ತದೆ ಡಿಸೆಂಬರ್ 2006ರ ಅಂತ್ಯದವರೆಗೆ ರೂ 751 85 ಲಕ್ಷಗಳು ವೆಚ್ಚವಾಗಿರುತ್ತದೆ

ಆ) ಮಲಪ್ರಭಾ ಬಲದಂಡೆ ನಾಲೆಯ ಕಿ ಮೀ 9 ರಿಂದ 32ರ ವರೆಗಿನ ಸುಧಾರಣೆ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ ಕಿ ಮೀ 33 ರಿಂದ 60ರವರೆಗಿನ ಸುಧಾರಣೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ನೀರಾವರಿ ಹಂಗಾಮಿಗಾಗಿ ಆಗಸ್ಟ್ 06 ರಿಂದ ಕಾಲುವೆಯಲ್ಲಿ ನೀರು ಬಿಟ್ಟಿರುವುದರಿಂದ ಕಾಮಗಾರಿಗಳು ಸ್ಥಗಿತಗೊಂಡಿರುತ್ತವೆ ಇಲ್ಲಿನ ಬಾಕಿ ಕಾಮಗಾರಿಗಳನ್ನು, ಕಾಲುವೆಯ ನೀರಾವರಿ ಅವಧಿ ಮುಕ್ತಾಯದ ನಂತರ ಕೈಗೊಳ್ಳಲಾಗುವುದು ಕಿ ಮೀ 61 ರಿಂದ 71ರ ವರೆಗಿನ ಸುಧಾರಣೆ ಕಾಮಗಾರಿಗಳ ಅಂದಾಜು ಪತ್ರಿಕೆಗಳು ಕರ್ನಾಟಕ ನೀರಾವರಿ ನಿಗಮದ ತಾಂತ್ರಿಕ ಉಪ ಸಮಿತಿಯ ಮುಂದೆ ಇರುತ್ತದೆ ಕಿ ಮೀ 73 ರಿಂದ 78ರವರೆಗಿನ ಸುಧಾರಣೆ ಕಾಮಗಾರಿಗಳ ಅಂದಾಜು ಪತ್ರಿಕೆಗಳು ತಯಾರಿಕೆ ಹಂತದಲ್ಲಿದೆ

ಮಲಪ್ರಭಾ ಎಡದಂಡೆ ನಾಲೆಯ ಕಿ ಮೀ 6 ರಿಂದ 10ರವರೆಗೆ ಸುಧಾರಣೆ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ ಕಿ ಮೀ 38ರ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದೆ ಕಿ ಮೀ 11 ರಿಂದ 13, 40, 44, 46, 48, 53 ರಿಂದ 54, 58 ರಿಂದ 59ರ ವರೆಗಿನ ಸುಧಾರಣೆ ಕಾಮಗಾರಿಗಳು ಪ್ರಗತಿಯಲ್ಲಿದ್ದು, ನೀರಾವರಿ ಹಂಗಾಮಿಗಾಗಿ ಆಗಸ್ಟ್ 06 ರಿಂದ ಕಾಲುವೆಯಲ್ಲಿ ನೀರು ಬಿಟ್ಟಿರುವುದರಿಂದ ಕಾಮಗಾರಿಗಳು ಸ್ಥಗಿತಗೊಂಡಿರುತ್ತವೆ ಇಲ್ಲಿನ ಬಾಕಿ ಕಾಮಗಾರಿಗಳನ್ನು, ಕಾಲುವೆಯ ನೀರಾವರಿ ಅವಧಿ ಮುಕ್ತಾಯದ ನಂತರ ಕೈಗೊಳ್ಳಲಾಗುವುದು ಕಿ ಮೀ 14 ರಿಂದ 21ರ ವರೆಗಿನ ಮತ್ತು ಕಿ ಮೀ 24ರ ಅಂದಾಜುಗಳು ನಿಗಮದ ಪರಿಶೀಲನೆಯಲ್ಲಿದೆ ಕಿ ಮೀ 34, 35, 50, 51, 57, 60 ರಿಂದ 66 ಮತ್ತು 70 ರಿಂದ 73ರ ವರೆಗಿನ ಸುಧಾರಣೆ ಕಾಮಗಾರಿಗಳ ಅಂದಾಜು ಪತ್ರಿಕೆಗಳು ಕರ್ನಾಟಕ ನೀರಾವರಿ ನಿಗಮದ ತಾಂತ್ರಿಕ ಉಪಸಮಿತಿಯ ಮುಂದೆ ಇರುತ್ತದೆ

ಇ) ಮಲಪ್ರಭಾ ಬಲದಂಡೆ ನಾಲೆಯ ಕಿಮೀ 32ರ ವರೆಗೆ ಬರುವ ಹಂಚಿಕೆಗಳ ಅಚ್ಚುಕಟ್ಟು ಪ್ರದೇಶದ ರೈತರಿಗೆ ಸುಧಾರಣೆಯ ಲಾಭ ದೊರೆತಿದೆ

ಮಲಪ್ರಭಾ ಬಲದಂಡೆ ನಾಲೆಯ ಕಿ ಮೀ 33 ರಿಂದ 78ರ ವರೆಗಿನ ಸುಧಾರಣೆ ಕಾಮಗಾರಿಗಳು ಪೂರ್ಣಗೊಂಡ ನಂತರ ಕೊನೆಯ ಭಾಗದ ಹಂಚಿಕೆಗಳ ಅಚ್ಚುಕಟ್ಟು ಪ್ರದೇಶದ ರೈತರಿಗೆ ಸುಧಾರಣೆಯ ಲಾಭ ಲಭ್ಯವಾಗುವುದು ಮಲಪ್ರಭಾ ಎಡದಂಡೆ ಕಾಲುವೆಗಳ ಸುಧಾರಣೆ ಕಾಮಗಾರಿಗಳು ಪ್ರಗತಿಯಲ್ಲಿರುವುದರಿಂದ ಮುಂದಿನ ವರ್ಷಗಳಲ್ಲಿ ಸುಧಾರಣೆಯ ಲಾಭವು ದೊರೆಯುತ್ತದೆ

511(553) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಮಲಪ್ರಭಾ ಯೋಜನೆಯಲ್ಲಿ ಒಟ್ಟು ಜಾಕವೆಲ್ಸ್‌ಗಳ ಸಂಖ್ಯೆ ಎಷ್ಟು,

ಆ) ಈ ಜಾಕ್‌ವೆಲ್‌ಗಳಿಂದ ಎಷ್ಟು ಹಳ್ಳಿಗಳಿಗೆ ಉಪಯೋಗ–ವಾಗುವುದು,

ಇ) ಮಲಪ್ರಭಾ ಅಚ್ಚುಕಟ್ಟು ಪ್ರದೇಶದ ಕೊನೆಯ ಹಂತದ ರೈತರಿಗೆ ಹಂಚು ಕಾಲುವೆಗಳ ದುರಸ್ತಿಯಾಗದೇ ನೀರಿನ ಸೌಲಭ್ಯ ದೊರಕದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಹಂಚು ಕಾಲುವೆಗಳನ್ನು ದುರಸ್ತಿ ಮಾಡಲಾಗಿದೆಯೇ,

ಉ) ಹಾಗಿದ್ದಲ್ಲಿ, ರೈತರಿಗೂ ನೀರಿನ ಸೌಕರ್ಯ ಒದಗಿಸಲು ಸರ್ಕಾರದ ಕ್ರಮವೇನು?

ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು)

ಅ) ಮಲಪ್ರಭಾ ಯೋಜನೆಯಲ್ಲಿ ಒಟ್ಟು 11 ಜಾಕ್‌ವೆಲ್‌ಗಳು ಇರುತ್ತವೆ

ಆ) ಇವುಗಳಿಂದ ಸವದತ್ತಿ ಮತ್ತು ಬೈಲಹೊಂಗಲ ತಾಲ್ಲೂಕಿನ ಒಟ್ಟು 62 ಹಳ್ಳಿಗಳಿಗೆ ಉಪಯೋಗವಾಗುತ್ತಿದೆ

ಇ) ಬಂದಿದೆ

ಈ) ಸರಕಾರದ ಮಾನದಂಡಗಳನ್ವಯ ಹಂಚು ಕಾಲುವೆಯ ಮುಖ್ಯ ಕಾಲುವೆಗಳ ದುರಸ್ತಿಗಾಗಿ ಅನುದಾನ ಬಿಡುಗಡೆಯಾಗುತ್ತಿದ್ದು, ಲಭ್ಯವಾಗುತ್ತಿರುವ ಅನುದಾನದಡಿ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ